ಮಕ್ಕಳಿಗೆ ಹೆದರಿಸುವುದನ್ನು ಹಲವು ಬಾರಿ ಕೇಳಿದ್ದರಿಂದ. ಬುದ್ಧಿ ಬಂದ ಮೇಲೆ ಗೊತ್ತಾಯಿತು, ಅದರಲ್ಲಿರುವುದು ಬರೇ ಒಂದಿಷ್ಟು ಬಿಳಿ ನಾಮದ ಕಡ್ಡಿ, ಸಣ್ಣ ಶಂಖ, ಒಂದು ಜಾಗಟೆ. ಇಷ್ಟೇ ಬಡ ದಾಸಯ್ಯನವರ ಸಂಪತ್ತು. ಇವರಿಗೆ ಹಾಲಕ್ಕಿ ನರಸಣ್ಣ ಎಂತಲೂ ಕರೆಯುತ್ತಿದ್ದರು. ಅವರು ಹಾಲಕ್ಕಿ ಎನ್ನುವ ಹಕ್ಕಿಯ ಕೂಗಿನ ಗ್ರಹಿಕೆಯ ಹಿನ್ನೆಲೆಯಲ್ಲಿ ಶಕುನ ಹೇಳುವವರಂತೆ. ಹಿರಿಯರು ಹೇಳುವ ಪ್ರಕಾರ ಅದು ಅವರ ಮನೆತನದ ಕಾಯಕ. ಅವರು, ಕೋಳಿ ಕೂಗುವ ಮುನ್ನ ಏಳುವವರು. ಕೈಕಾಲು ಮುಖ ತೊಳೆದುಕೊಂಡು, ಗಂಧದ ಕಡ್ಡಿ ಹಚ್ಚಿ, ದೇವರಿಗೆ ಕೈ ಮುಗಿದು, ವೇಷವನ್ನು ಧರಿಸಿ, ಬಗಲಿಗೆ ಜೋಳಿಗೆಯನ್ನು ತಗುಲಿ ಹಾಕಿಕೊಂಡು, ಕೈಯಲ್ಲಿ ಬುಡುಬುಡಿಕೆ ಹಿಡಿದು ಹಳ್ಳಿ ಹಳ್ಳಿಗೆ ಹೋಗುತ್ತಾರಂತೆ. ಮನೆ ಸಮೀಪಿಸುತ್ತಿರುವಂತೆಯೇ ಕೈಯಲ್ಲಿ ಹಿಡಿದ ಬುಡುಬುಡಿಕೆ ನುಡಿಸುತ್ತಾ 'ಶುಭವಾಗತೈತೆ ಶುಭವಾಗತೈತೆ' ಎನ್ನುತ್ತ ಬರುತ್ತಿದ್ದರು. ಅವರು ಶಕುನವನ್ನು ನುಡಿವಾಗ 'ಹಾಲಕ್ಕಿ ನುಡಿತೈತೆ' ಎನ್ನುತ್ತಲೇ ಹೇಳುತ್ತಿದ್ದರು. ಅವರ ಮೇಲೆ ಅಪಾರ ನಂಬಿಕೆ ಹಳ್ಳಿಯ ಜನರದ್ದು. ಆ ಮೂಲಕ ಮನೆಯವರನ್ನೆಲ್ಲಾ ಸಂತೋಷಪಡಿಸಿ ಬಟ್ಟೆಬರೆ ದವಸಧಾನ್ಯಗಳನ್ನು ಜೋಳಿಗೆಯಲ್ಲಿ ತುಂಬಿಸಿಕೊಂಡು ಮುಂದೆ ಸಾಗುತ್ತಿದ್ದರು. ಹೀಗೆ ತಮ್ಮ ಸಂಸಾರದ ಹೊಟ್ಟೆ ಬಟ್ಟೆಗಳಿಗೆ ಸಾಕಾಗುವಷ್ಟು ಮಾತ್ರ ಅವರ ಜೋಳಿಗೆಯ ಗಳಿಕೆ.

ಶಾಲೆಗೆ ಹೋಗುವಾಗ ಗಮನಿಸಿದ್ದು ಶಾಲಾ ಮಾಸ್ತರರು ಬಗಲಿಗೇರಿಸಿಕೊಂಡು ಬರುತ್ತಿದ್ದ ಜೋಳಿಗೆ. ಕನ್ನಡ ಮಾಧ್ಯಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿದ್ದ ದಿನಗಳವು. ಇಂಗ್ಲಿಷ್ ಎಂದರೆ ಆಗ ಹಳ್ಳಿಯ ಮಕ್ಕಳಿಗೆ ಒಂದು ಶಾಪ. ಇಂಗ್ಲಿಷ್ ಪ್ರಾಧ್ಯಾಪಕರಿಗೆ ಅವರು ಕೊಟ್ಟ ಪಾಠವನ್ನು ಮಾಡಿಕೊಂಡು ಬರದಿರುವ ಮಕ್ಕಳ ಮೇಲೆ ಬಹಳ ಕೋಪ. ಎದ್ದು ನಿಲ್ಲಿಸಿ, 'ನೀನು ಶಾಲೆಗೆ ಕಲಿಯಲು ಬರಬೇಡ. ಜೋಳಿಗೆ ತೆಗೆದುಕೊಂಡು ಹೋಗು' ಎಂದು ಸಿಟ್ಟನ್ನು ತೋರಿಸದೇ ಮುಗುಳು ನಗುತ್ತ ಹೇಳುತ್ತಿದ್ದರು. ಅದೇ ವಿದ್ಯಾರ್ಥಿಯ ಹತ್ತಿರ, 'ಹಾಗಂದರೇನು ಅಂತ ನಿನಗೆ ಗೊತ್ತಿದೆಯೇ' ಎಂಬ ಪ್ರಶ್ನೆ. ವಿದ್ಯಾರ್ಥಿ ಸುಮ್ಮನೆ ತಲೆಯನ್ನು ಮೇಲೆ ಕೆಳಗೆ ಅಲ್ಲಾಡಿಸಿ ಹೊರಗೆ ಹೋಗಿ ನಿಲ್ಲುತ್ತಿದ್ದುದು ಈಗಲೂ ನೆನಪಿದೆ. ಅವರ ಮಾತಿನ ಅರ್ಥ ಆಗ ನನಗೆ ಗೊತ್ತಿರುವಷ್ಟೇ ನನ್ನ ಸಹಪಾಠಿಗೂ ಗೊತ್ತಿದ್ದಿರಬಹುದು. ಅದರೊಳಗಿನ ನಿಗೂಢ ವಿಶಾಲತೆಯನ್ನು ಬಹುಶಃ ಗುರುಗಳು ಅರ್ಥೈಸಿಕೊಂಡೇ ಹೇಳಿರಬೇಕು – ಹೋಗಿ, ನಾಲ್ಕು ಜನರಿಗೆ ಒಳಿತನ್ನು ಮಾಡು ಎಂದು. ಎಷ್ಟೆಂದರೂ ವಿದ್ಯಾರ್ಥಿ ಅಲ್ಲವೇ.

ನಮ್ಮೂರ ಕಡೆ ಒಂದು ಮಾತಿದೆ, 'ಇದೊಂದು ಜೋಳಿಗೆ ಬರ್ತಿಗೆ ಮಾತ್ರ' ಅಂತ. ಇದು ಬೈಗುಳವೇ ಹೌದು. ಆದರೆ ಬಹಳ ನಾಜೂಕಾಗಿ ಬೈಯುವಂತಹದ್ದು. ಉಪಕಾರಿಯಲ್ಲ, ತನ್ನ ಹೊಟ್ಟೆ ತುಂಬಿಸಿಕೊಳ್ಳಲಿಕ್ಕೆ ಮಾತ್ರ ಲಾಯಕ್ಕು, ಬೇರೆ ಏನೂ ಪ್ರಯೋಜನಕ್ಕೆ ಬರುವುದಲ್ಲ ಅಂತ.

ಇನ್ನು ವಿಶೇಷ ಎಂದರೆ ಇಲ್ಲಿ ಜೋಳಿಗೆ ಪದ ಪ್ರಯೋಗವಾದುದು. ಅಂದರೆ ಹತ್ತು ಅರ್ಥಗಳ ಜೊತೆ ಹನ್ನೊಂದನೆಯದು ಅಷ್ಟೆ. ಈಗಿನ ಕಾಲಮಾನದಲ್ಲಿ ವಿಶೇಷ ಸ್ಥಾನಮಾನಕ್ಕೆ ಅನರ್ಹ ಎಂಬ ಅರ್ಥವೂ ಬರುವಂತಹದ್ದು.

ಆಗಿನ ಕಲಾಕಾರರು ಹೆಚ್ಚಾಗಿ ಜೋಳಿಗೆಯನ್ನು ಬಳಸುತ್ತಿದ್ದರು. ಊರಿನ ದೇವಸ್ಥಾನದ ವಾರ್ಷಿಕ ಕಾರ್ಯಕ್ರಮ ಒಂದು ವಾರ ನಡೆಯುತ್ತಿತ್ತು. ಅಲ್ಲಿಗೆ ಬರುವ ಹರಿಕೀರ್ತನೆ ದಾಸರು, ಗಾಯನಕಾರರು ಎಲ್ಲರೂ ಹೆಗಲಿಗೊಂದು ಜೋಳಿಗೆ ಹಾಕಿಕೊಂಡು ಅವರದೇ ಗುಂಗಿನಲ್ಲಿ ಹಾಡುಗಳನ್ನು ಗುನುಗುತ್ತಾ ಇರುವವರು. ಚಿತ್ರಕಲಾ ಶಿಬಿರ, ಪ್ರದರ್ಶನ ನಡೆಸಿಕೊಡುವ ಚಿತ್ರಕಾರರ ಜೋಳಿಗೆಯ ಮೇಲಂತೂ ಅಂಟಿದ ಬಣ್ಣಗಳ ಅಲಂಕಾರ. ಇಲ್ಲಿಯೂ ಅಷ್ಟೇ, ಅವರ ಕಾಯಕಕ್ಕೆ ಬೇಕಾಗುವ ಪರಿಕರಗಳು. ಹೆಚ್ಚೆಂದರೆ ಅವರ ಕಲೆಗೆ ಸನ್ಮಾನವಾಗಿ ಪಡೆದ ಹಣ್ಣುಹಂಪಲುಗಳು, ಒಂದು ಜೊತೆ ಉಡುಪು.

ಹೌದಲ್ಲಾ! ಜೋಳಿಗೆಯೆಂದರೆ ಇಷ್ಟೇನಾ? ಅದು ಆ ಕಾಲದಲ್ಲಾಯಿತು. ವಯಸ್ಸಿನ ಬುದ್ಧಿಮಟ್ಟಕ್ಕೆ ತಕ್ಕಂತೆ. ಆಗ ನಮ್ಮ ಮನಸ್ಸೂ ಪುಟ್ಟ ಜೋಳಿಗೆಯಾಗಿತ್ತು. ಬೇಕಾಗುವಷ್ಟು ಮಾತ್ರ ತುಂಬಿಸಿ ಸಂತೋಷಪಡುವ ಮುಗ್ಧತೆ ಇರುವಂತದ್ದು. ಕನಸುಗಳನ್ನು ಮನಸ್ಸಿನ ಜೋಳಿಗೆಯಲ್ಲಿ ತುಂಬಿಸಿ ನಡೆಯುವುದು ಮುಂದಿನ ದಾರಿಯಲ್ಲಿ. ಹರಕು ಜೋಳಿಗೆಯಾದರೆ ಎಷ್ಟೋ ಕನಸುಗಳು ಸುರಿದುಹೋಗುವ ಸಾಧ್ಯತೆಗಳಿವೆ. ದಾರಿಗುಂಟ ಸಾಗಿ ಗುರಿ ಮುಟ್ಟುವಾಗ ನೂರು ಕನಸುಗಳಲ್ಲಿ ಐವತ್ತರಷ್ಟು ಮಾತ್ರ ನನಸಾಗುವುದು. ಜೋಳಿಗೆ ಗಟ್ಟಿಯಾಗಿದ್ದು, ತುಂಬುವ ಸರಕುಗಳು ಯೋಗ್ಯವಾಗಿದ್ದರೆ ಅದನ್ನು ಹೊತ್ತು ನಡೆಯುವಾಗ ಆಯಾಸವಿರುವುದಿಲ್ಲ.

ಪ್ರೀತಿಯ ಭಿಕ್ಷೆಗಾಗಿ ಪ್ರೇಮದ ಜೋಳಿಗೆ ಹಿಡಿಯುವ ಕಾಲವು ಎಲ್ಲರ ಜೀವನದಲ್ಲೂ ಬರುವಂಥದ್ದು.

'ಶಿವನು ಭಿಕ್ಷಕ್ಕೆ ಬಂದ ನೀಡು ಬಾರೆ ತಂಗಿ;
ಇವನಂಥ ಚೆಲುವರಿಲ್ಲ ನೋಡು ಬಾರೆ

ಎಂಬ ಜಾನಪದ ಗೀತೆಯಲ್ಲಿ ಇರುವ ಸಂವೇದನೆ ಅದೆಷ್ಟು ಸೊಗಸಾಗಿದೆ!. 'ಭಾವಶುದ್ಧಿ ಇಲ್ಲದ ಭಿಕ್ಷೆಯನ್ನು ಒಲ್ಲೆ' ಎನ್ನುವ ಚೆಲುವ, ಪಾರ್ವತಿಯ ಮನಸ್ಸನ್ನು ಕದಿಯಲು ಜೋಳಿಗೆ ಹಿಡಿದು ಬಂದ ಜೋಗಿ ಜಂಗಮ. ಬ್ರಹ್ಮ ಕಪಾಲವನ್ನು ಹಿಡಿದು, ಜೋಳಿಗೆಯೊಡ್ಡಿ ನಿಂತ ಮುದ್ದು ಮುಖದ ಜಂಗಮ. ಈತ ಕೊಟ್ಟದ್ದೆಲ್ಲವನ್ನೂ ಸ್ವೀಕರಿಸುವ ಜಂಗಮನಲ್ಲ. ಮನ್ಮಥನ ಮದವನ್ನು ಇಳಿಸಿ, ಪರ್ವತರಾಜನ ಮಗಳ ಮನವೊಲಿಸಲು ಬಂದ, ಜಂಗಮ. ಗಿರಿಜೆಯಲ್ಲಿ ಪ್ರೇಮ ಭಿಕ್ಷೆ ಬೇಡಿದವ. ಎಂತಹ ಸುಂದರ ಕಲ್ಪನೆ! ಹೀಗೆ ಒಂದಾದ ಸತಿ ಪತಿಗಳು ಭಾರತೀಯ ಪುರಾಣದ ಸುಂದರ ಸಂಕೇತವಲ್ಲವೇ?

ಮುಂದೆ 'ಶರಣಸತಿ ಲಿಂಗಪತಿ' ಎಂದವರು ಶರಣರು. ಅವರ ಅನುಭಾವಗಳ ಜೋಳಿಗೆಯಲ್ಲಿರುವ ಅನುಭವದ



ನುಡಿಗಳು ಜಗತ್ತನ್ನೇ ಪ್ರೀತಿಸುವಂತದ್ದು. ಈ ಹಂತಕ್ಕೆ ಬರುವಾಗ ಜೋಳಿಗೆ ಎಂಬ ಪದ ರೋಮಾಂಚನಗೊಳಿಸುವಂತದ್ದು. ಊಹೆಗೂ ನಿಲುಕದ ಜೋಳಿಗೆಯ ವೈಶಾಲ್ಯತೆ ಇದರಲ್ಲಿದೆ. 'ಇವನಾರವ ಇವನಾರವ ಇವನಾರವ ಎಂದೆನಿಸದಿರಯ್ಯ, ಇವ ನಮ್ಮವ ಇವ ನಮ್ಮವ ಇವ ನಮ್ಮವನೆಂದೆನಿಸಯ್ಯ.' ಶಿವಶರಣರ ವಚನ ಜೋಳಿಗೆ ಎಂತಹ ಅರ್ಥಪೂರ್ಣವಾದದ್ದು! ಈ ಅಮೂಲ್ಯ ವಚನಗಳ ಜೋಳಿಗೆಯನ್ನು ಶಿವಶರಣರು ಲೋಕಕಲ್ಯಾಣಕ್ಕಾಗಿ ಬಳಸಿದರು, ಸಮಾಜಸುಧಾರಣೆಗಾಗಿ ಮೌಲಿಕ ವಚನಗಳನ್ನು ಜೋಳಿಗೆಯಿಂದ ತೆಗೆದು ಹಂಚಿದರು. ಸಮಾನತೆಯ ಕರೆಯಿತ್ತರು. ಮಾನವೀಯತೆಯನ್ನು ಮೆರೆದರು. ಈ ಜೋಳಿಗೆ ಬರಿಯ ಹೊಟ್ಟೆಪಾಡಿಗಾಗಿ ಬೇಡುವ ಉದ್ದೇಶದ್ದಲ್ಲ. ಎಲ್ಲೋ ಒಂದು ಕಡೆ ಸಂಚಯವಾಗಿರುವಂತಹದ್ದನ್ನು ಸದ್ವಿನಿಯೋಗ ಮಾಡುವ ಉದ್ದೇಶ ಉಳ್ಳದ್ದು, ಇರಲಾರದವನಿಗೆ ತಲುಪಿಸುವಂತದ್ದು. ದಾಸೋಹಂ ಎಂದು ಎಲ್ಲವನ್ನೂ ಸಮರ್ಪಣೆ ಮಾಡಿ ತಾನೇ ದಾಸನಾಗಿ, ಹಸಿದವರಿಗೆ ಅರ್ಪಣೆಮಾಡುವ ನಿರಹಂಕಾರಿ, ನಿಸ್ವಾರ್ಥಿ.

ದುಶ್ಚಟಗಳು ಹೆಚ್ಚಾಗುತ್ತಿರುವ ಆಧುನಿಕ ಯುಗದಲ್ಲಿ ಈ ಶರಣರ ಜೋಳಿಗೆ ಹೊಸ ಬಗೆಯ ಸಮಾಜ ಸುಧಾರಣೆಯ ಕಾರ್ಯವನ್ನು ಮಾಡುತ್ತಿದೆ. ಜಂಗಮರು ಓಣಿಯಲ್ಲಿ ಜೋಳಿಗೆ ಹಿಡಿದು ಬಂದಾಗ, ಜನರು ತಮ್ಮ ದುಶ್ಚಟಗಳನ್ನು ಒಂದು ಕಾಗದದಲ್ಲಿ ಬರೆದು ಅದನ್ನು ಜೋಳಿಗೆಯಲ್ಲಿ ಹಾಕುವರು. ಶರಣರ ಜೋಳಿಗೆಗೆ ದುಶ್ಚಟ ಹೋಯಿತೆಂದರೆ ಅದನ್ನು ಆತ ಬಿಡಲೇಬೇಕು. ಯಾಕೆಂದರೆ ಅದು ಶಿವ ಮೆಚ್ಚದ ಕಾರ್ಯ. ಇದರಿಂದ ಎಷ್ಟೋ ಜನರು ಮಾರಣಾಂತಿಕ ಕಾಯಿಲೆಗಳಿಂದ ದೂರವಿರಬಹುದು. ಎಷ್ಟೋ